## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 09-11-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 193/2022 ಕಲಂ 457, 380 ಐಪಿಸಿ :-

ದಿನಾಂಕ 08/11/2022 ರಂದು 1345 ಗಂಟೆಗೆ ಫಿರ್ಯಾದಿ ಶ್ರೀ. ರಾಘವೇಂದ್ರ ತಂದೆ ಮಲಶೆಟ್ಟಿ ಸುಲೆಗಾಂವಕರ ವಯ:28 ವರ್ಷ ಜಾತಿ:ಲಿಂಗಾಯತ ಉ:ವ್ಯಾಪಾರ ಸಾ/ಮಣಗೆ ಲೇಔಟ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನಂದರೆ, ಇವರು ಸುಮಾರು 11 ತಿಂಗಳ ಹಿಂದೆ ಬೀದರ ನಗರದ ಮಣಗೆ ಲೇಔಟನಲ್ಲಿ ಒಂದು ಮನೆ ಕಟ್ಟಿಕೊಂಡು ಕುಟುಂಬದೊಂದಿಗೆ ವಾಸವಾಗಿದ್ದು ಇರುತ್ತದೆ. ಹಿಗಿರುವಲ್ಲಿ ದಿನಾಂಕ 07/11/2022 ರಂದು ಸಾಯಂಕಾಲ 7:30 ಪಿ.ಎಮ್. ಗಂಟೆಗೆ ಮನೆಯ ಬಾಗಿಲು ಮುಚ್ಚಿ, ಮನೆಗೆ ಬೀಗ ಹಾಕಿ ಹೊಗಿದ್ದು, ದಿನಾಂಕ 08/11/2022 ರಂದು ಮುಂಜಾನೆ 8:45 ಗಂಟೆಗೆ ಮರಳಿ ಮನೆಗೆ ಬಂದು ನೋಡಿದಾಗ ಮನೆಗೆ ಹಾಕಿದ ಬೀಗ ಮುರಿದಿದ್ದು, ಸೆಂಟರ ಲಾಕ ಪಕ್ಕದಲ್ಲಿ ಬಾಗಿಲು ಮುರಿದಿದ್ದು, ಮನೆಯಲ್ಲಿ ಹೋಗಿ ನೋಡಿದಾಗ ಅಲಮಾರೆಯಲ್ಲಿ ಇಟ್ಟಿದ್ದ 1)15 ಗ್ರಾಂ. ತೂಕದ ಬಂಗಾರ ಚೈನ ಅ.ಕಿ.60,000/-ರೂ. 2)50 ಗ್ರಾಂ. ತೂಕದ ಬಂಗಾರದ ಗಂಠನ ಸರ ಅ.ಕಿ. 2,00,000/-ರೂ. 3)15 ಗ್ರಾಂ. ತೂಕದ ಒಟ್ಟು 3 ಬಂಗಾರದ ಉಂಗುರಗಳು(ಪ್ರತಿಯೊಂದು 5 ಗ್ರಾಂ. ತೂಕದ್ದು) ಅ.ಕಿ. 60,000/-ರೂ. 4)ಒಂದು ಕೈರೋಸ ಕೈಗಡಿಯಾರ ಅ.ಕಿ.50,000/-ರೂ. 5)ನಗದು ಹಣ.2,00,000/-ರೂ. ಅಲಮಾರೆಯಲ್ಲಿ ಇರಲಿಲ್ಲ. ಹೀಗೆ ಒಟ್ಟು ಸೇರಿ 5,70,000/-ಮೌಲ್ಯದ ಮಾಲು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 67/2022 ಕಲಂ 15(ಎ), ಕೆ.ಇ. ಕಾಯ್ದೆ :-

**ದಿನಾಂಕ:** 08/11/2022 **ರಂದು ಮುಂಜಾನೆ** 11.45 **ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಚೀಕಪೇಟ ಗ್ರಾಮದಲ್ಲಿ ಬುದ್ದ ಮಂದಿರದ ಹತ್ತಿರ ಭಿಮಶಾ ತಂದೆ ಝುರೆಪ್ಪಾ ಟೆಕರಾಜ ಇತನು ಸರಕಾರದ ಯಾವುದೇ ಪರವಾನಿಗೆ ಇಲ್ಲದೆ ಸಾರ್ವಜನಿಕರಿಂದ ಹಣ ಪಡೆದು ಸರಾಯಿ , ನೀರು ಮತ್ತು ಗ್ಲಾಸ ಕೊಟ್ಟು ಸರಾಯಿ ಕುಡಿಯಲು ಅನುವು ಮಾಡಿ ಕೊಡುತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಸರಾಯಿ ಮಾರಾಟ ಮಾಡುತಿದ್ದ ವ್ಯಕ್ತಿಗೆ ಹಿಡಿದು ಹೆಸರು ವಿಳಾಸ ವಿಚಾರಿಸಲು ತನ್ನ ಹೆಸರು ಭಿಮಶಾ ತಂದೆ ಝುರೆಪ್ಪಾ ಟೆಕರಾಜ ವಯ** 25 **ವರ್ಷ ಜಾತಿ ಎಸ್.ಸಿ ಹೋಲಿಯಾ ಉ: ಕೂಲಿ ಸಾ: ಚಿಕಪೇಠ ಅಂತ ತಿಳಿಸಿದನು. ಇಲ್ಲಿ ಸ್ಥಳದಲ್ಲಿ ಒಂದು ಪ್ಲಾಸ್ಟಿಕ ಚೀಲ ಇದ್ದು ಅದನ್ನು ಪರೀಶಿಲಿಸಿ ನೋಡಲಾಗಿ ಇದರಲ್ಲಿ** 2 Black & White **ಅಂತ ಬರೆದಿದ್ದ ಸರಾಯಿ ತುಂಬಿದ ಬಾಟಲಿಗಳು ಇರುತ್ತವೆ. ಆರೋಪಿತನಿಗೆ ಮತ್ತು ಮುದ್ದೆಮಾಲು ವಶಕ್ಕೆ ತೆಗೆದುಕೊಂಡು ಪ್ರಕಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.**

### ಮನ್ನಾಏಖೇಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 117/2022 ಕಲಂ 279,337, 304(ಎ) ಐಪಿಸಿ :-

ದಿನಾಂಕ:08/11/2022 ರಂದು 11:00 ಗಂಟೆಗೆ ಬೀದರ ಜಿಲ್ಲಾ ಸರಕಾರಿ ಆಸ್ಪತ್ರೆಯಿಂದ ಅಪಘಾತವಾದ ಬಗ್ಗೆ ಮಾಹಿತಿ ಬಂದಿದ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ ಹಾಜರಿದ್ದ ಫಿರ್ಯಾದಿ ಜಗನ್ನಾಥ ತಂದೆ ಮಾರುತಿ ಹೊನ್ನಳ್ಳಿ ವಯ 25 ವರ್ಷ ಜಾತಿ:ಲಿಂಗಾಯತ ಉದ್ಯೋಗ:ಖಾಸಗಿ ಕಂಪನಿಯಲ್ಲಿ ಕೆಲಸ ಸಾ||ಖೇಣಿರಂಜೋಳ ಸಧ್ಯ:ತಾಳಮಡಗಿ ಈತನು ಕೊಟ್ಟ ಹೇಳಿಕೆಯನ್ನು 12:00 ಗಂಟೆಯಿAದ 13:00 ಗಂಟೆಗೆ ವರೆಗೆ ಪಡೆದುಕೊಂಡು ಸಾರಂಶವೇನೆAದರೆ ತಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದು ಸುಮಾರು 10 ವರ್ಷದಿಂದ ಕುಟುಂಬದವರೆಲ್ಲರೂ ತಾಳಮಡಗಿ ಗ್ರಾಮದಲ್ಲಿ ವಾಸವಾಗಿದ್ದು ತಂದೆ ಮಾರುತಿ ರವರು ಲಾರಿ ಚಲಾಯಿಸಿಕೊಂಡು ಉಪಜೀವನಮಾಡುತ್ತಾರೆ. ದಿನಾಂಕ: 08/11/2022 ರಂದು ಮುಂಜಾನೆ ಇವರ ತಂದೆ ರವರು ಬಜಾರ ಕಡೆಗೆ ಹೊಗಿ ಬರುತ್ತೇನೆಂದು ಮನೆಯಲ್ಲಿ ಹೇಳಿ ಹೊಗಿರುತ್ತಾರೆ. ಸರಕಾರಿ ಆಸ್ಪತ್ರೆ ಎದುರುಗಡೆ ರೋಡಿನ ಮೇಲೆ ಮನೆಯ ಕಡೆಗೆ ನಡೆದುಕೊಂಡು ಬರುತ್ತಿದ್ದಾಗ ಫ್ಲೈವರ ಬ್ರಿಡ್ಜ ಕಡೆಯಿಂದ

ಗುಂಡಪ್ಪಾ ತಂದೆ ಪಾಂಡುರAಗ ದಂಡೆನೋರ ವಯ 16 ವರ್ಷ ಜಾತಿ:ಎಸ್ ಟಿ ಗೊಂಡ ಉದ್ಯೋಗ: ವಿಧ್ಯಾರ್ಥಿ ಈತನು ಮೊಟಾರ ಸೈಕಲ್ ನಂ: ಕೆಎ-38/ಎಕ್ಸ-1814 ನೇದ್ದನ್ನು ಅತಿವೇಗ ಹಾಗು ನಿಸ್ಕಾಳಜೀತನದಿಂದ ಹಾಗು ಮಾನವ ಜೀವಕ್ಕೆ ಅಪಯಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಹಿಂದಿನಿAದ ಡಿಕ್ಕಿ ಮಾಡಿರುತ್ತಾನೆ. ತಂದೆಯ ಬಲ ಮೇಲಕಿಗೆ ಭಾರಿ ಗುಪ್ತಗಾಯವಾಗಿ ಬಲಕಿವಿಯಿಂದ ರಕ್ತ ಸ್ರಾವ ಹಾಗು ಬಾಯಿಯಿಂದ ರಕ್ತಸ್ರಾವವಾಗಿ ಮೃತಪಟ್ಟಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 133/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ:08/11/2022 ರಂದು 10.30 ಗಂಟೆಗೆ ಫಿರ್ಯಾದಿ ಮಹೇಂದ್ರಕುಮಾರ ಪಿ.ಎಸ್.ಐ (ಕಾಸು) ಠಾಣೆಯಲ್ಲಿದ್ದಾಗ ಕೂಡಂಬಲ ಗ್ರಾಮದ ಲಕ್ಷ್ಮೀ ಮಂದಿರ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಹಣ ಹಚ್ಚಿ ಅಂದರ ಬಾಹರ ಎಂಬ ಎಂಬ ನಸೀಬಿನ ಜೂಜಾಟ ಆಡುತ್ತಿದ್ದಾರೆ ಅಂತ ಮಾಹಿತಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ಕೊಡಂಬಲ ಗ್ರಾಮದ ಲಕ್ಷ್ಮೀ ಮಂದಿರದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಮರೆಯಾಗಿ ನಿಂತು ನೋಡಲು 8-9 ಜನ ಜೂಜಾಟದಲ್ಲಿ ನಿರತರಾಗಿರುವುದನ್ನು ನೋಡಿ ಖಚಿತ ಮಾಡಿಕೊಂಡು ಅವರ ಮೇಲೆ ದಾಳಿ ಮಾಡಿ ಹಿಡಿಯಲು 09 ಜನರು ಸಿಕ್ಕಿದ್ದು, ಅವರ ಹೆಸರು ಮತ್ತು ವಿಳಾಸ ವಿಚಾರಿಸಿ ಅಂಗ ಪರಿಶೀಲನೆ ಮಾಡಲು 1] ಶಿವಕುಮಾರ ತಂದೆ ಶರಣಪ್ಪಾ ಹಲಗೆನೊರ, ವಯ:35 ವರ್ಷ, ಜಾ:ಕ್ರೀಶ್ಚಿಯನ್ ಉ:ಕೂಲಿ ಸಾ:ಕೊಡಂಬಲ ಈತನಿಂದ ನಗದು ಹಣ ರೂ .2000/- ಸಿಕ್ಕಿದ್ದು . 2] ಸಿದ್ದಪ್ಪಾ ತಂದೆ ಕಲ್ಲಪ್ಪಾ ಚಿಂಚೋಳ್ಳಿ, ವಯ:25 ಷರ್ಷ, ಉ:ಕೂಲಿ, ಜಾ:ಕುರುಬುರ ಸಾ; ಕೊಡಂಬಲ ಈತನಿಂದ ನಗದು ಹಣ ರೂ .500/- ಸಿಕ್ಕಿದ್ದು. 3]ನಾಗಪ್ಪಾ ತಂದೆ ಮಾಣಿಕಪ್ಪಾ ನೀಡವಚಾ, ವಯ:30 ವರ್ಷ ಸಾ:ವಡ್ಡರ, ಉ:ಕೂಲಿ ಸಾ:ಕೂಡಂಬಲ. ಈತನಿಂದ ನಗದು ಹಣ ರೂ .200/- ಸಿಕ್ಕಿದ್ದು. 4] ಗುರುನಾಥ ತಂದೆ ಭೀಮಶಾ ರಟಕಲ್ ವಯ:32 ವರ್ಷ, ಜಾ:ಕುರುಬ ಉ:ಕೂಲಿ ಸಾ:ಕೊಡಂಬಲ ಈತನಿಂದ ನಗದು ಹಣ ರೂ .800/- ಸಿಕ್ಕಿದ್ದು. 5] ಗುಲಾಬ ತಂದೆ ಹೀರಾಸಿಂಗ ರಾಜಪೂತ ವಯ:33 ವರ್ಷ, ಜಾ:ರಾಜಪೂತ ಉ:ಕೂಲಿ ಸಾ:ಕೊಡಂಬಲ ನಗದು ಹಣ ರೂ .3100/- ಸಿಕ್ಕಿದ್ದು. 6] ಗೌಸ ತಂದೆ ಮಹೆಬೂಬ ಕಮಲಾಪೂರೆ, ವಯ:24 ವರ್ಷ, ಜಾ: ಮುಸ್ಲಿಂ ಉ : ಕೂಲಿ ಸಾ: ಕೊಡಂಬಲ ಈತನಿಂದ ನಗದು ಹಣ ರೂ.150/- ಸಿಕ್ಕಿದ್ದು . 7] ಚಾಂದಪಾಶಾ ತಂದೆ ಖಾಜಾಮೈನೋದ್ದಿನ ಸೇರಿಕಾರ, ವಯ:49 ವರ್ಷ, ಜಾ: ಮುಸ್ಲಿಂ ಉ : ಒಕ್ಕಲುತನ ಸಾ: ಕೊಡಂಬಲ ಈತನಿಂದ ನಗದು ಹಣ ರೂ.3900/- ಸಿಕ್ಕಿದ್ದು . 8] ವೀರಶೇಟ್ಟಿ ತಂದೆ ಅಣೇಪ್ಪಾ ದೇಶಮುಖ ವಯ:42 ವರ್ಷ ಜಾ : ಲಿಂಗಾಯತ ಉ:ಒಕ್ಕುಲತನ, ಸಾ: ಕೊಡಂಬಲ ಈತನಿಂದ ನಗದು ಹಣ ರೂ .14050/- ಸಿಕ್ಕಿದ್ದು . 9] ಶಂಕರ ತಂದೆ ಭೀಮಶಾ ಹಜರಗೆ, ವಯ:32 ವರ್ಷ ಜಾ : ಲಿಂಗಾಯತ ಉ:ಕೂಲಿ, ಸಾ: ಕೊಡಂಬಲ ಈತನಿಂದ ನಗದು ಹಣ ರೂ .50/- ಸಿಕ್ಕಿದ್ದು, ಎಲ್ಲರ ಮಧ್ಯೆ ನಗದು ಹಣ 1250/-ರೂ. ಹಾಗು 52 ಇಸ್ಪೀಟ್ ಎಲೆಗಳು ಸಿಕ್ಕಿದ್ದು, ಹೀಗೆ ಎಲ್ಲ ಸೇರಿ ಒಟ್ಟು ನಗದು ಹಣ 25,950/-ರೂ. ಹಾಗು 52 ಇಸ್ಪೀಟ ಎಲೆಗಳು ಇದ್ದು . ಅವರುಗಳಿಂದ ಸಿಕ್ಕ ಒಟ್ಟು ನಗದು ಹಣ ರೂ.25950/-,ಹಾಗು 52 ಇಸ್ಪೀಟ ಎಲೆಗಳು , ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.